1	2	3	4
3.	ಕೋಲಾರ	537.01	214.95
4.	ತುಮಕೂರು	654.30	407.09
5.	ಚಿತ್ರದುರ್ಗ	354.52	306.69
6.	ದಾವಣಗೆರೆ	471.11	416.17
7.	ಶಿವಮೊಗ್ಗ	299.00	223.01
8.	ಮೈಸೂರು	103.49	170.57
9.	ಮಂಡ್ಯ	523.40	310.69
10.	ಚಾಮರಾಜನಗರ	359.99	157.15
11.	ಹಾಸನ	505.02	199.20
12.	ದಕ್ಷಿಣ ಕನ್ನಡ	50.00	72.08
13.	ಉಡುಪಿ	310.00	324.29
14.	ಕೊಡಗು	295.00	136.16
15.	ಚಿಕ್ಕಮಗಳೂರು	401.11	251.93
16.	ಬೆಳಗಾಂ	790.00	413.46
17.	ಧಾರವಾಡ	311.52	222.63
18.	ಹಾವೇರಿ	278.91	281.05
19.	ಗದಗ	170.49	100.21
20.	ಉತ್ತರ ಕನ್ನಡ	312.60	229.60
21.	ಬಿಜಾಪುರ	360.49	173.92
22.	ಬಾಗಲಕೋಟೆ	304.20	254.31
23.	ಗುಲಬರ್ಗಾ	577.50	345.22
24.	ಬೀದರ್	418.60	197.72
25.	ರಾಯಚೂರು	329.98	303.68
26.	ಕೊಪ್ಪಳ	259.72	257.06
27.	ಬಳ್ಳಾರಿ	4.70	42.18
	ಒಟ್ಟು	**9892.40***	**6731.36**

(*ತ್ವರಿತ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮದಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದಲ್ಲಿ, ಬಾಕಿ ರೂ. 1243.60 ಲಕ್ಷಗಳನ್ನು ಸಬ್ ಮಿಷನ್ ಯೋಜನೆಗಳ ಅನುಷ್ಠಾನಕ್ಕಾಗಿ ಬಳಸಲಾಗುತ್ತಿದೆ.)

ಸ್ಥಗಿತಗೊಂಡಿರುವ ತುರುವೇಕೆರೆ ಕಾಲೇಜು ಕಟ್ಟಡದ ಕಾಮಗಾರಿ

2041(2557) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ತುರುವೇಕೆರೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುರುವೇಕೆರೆಯಲ್ಲಿ ಕಟ್ಟುತ್ತಿರುವ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಎಷ್ಟು ವರ್ಷಗಳಿಂದ ಕಾಮಗಾರಿ ಸ್ಥಗಿತ ಆಗಿದೆ; ಕಾರಣವೇನು;

ಇ) ಪುನಃ ಪ್ರಾರಂಭ ಮಾಡಲು ಸರ್ಕಾರಕ್ಕೆ ಇರುವ ತೊಂದರೆಯೇನು;

ಈ) ಯಾವಾಗ ಪ್ರಾರಂಭ ಮಾಡಲಾಗುವುದು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಸುಮಾರು 5 ವರ್ಷಗಳಿಂದ ಅನುದಾನದ ಕೊರತೆಯಿಂದಾಗಿ ಕಾಮಗಾರಿ ಸ್ಥಗಿತ ಆಗಿದೆ.

ಇ) ಸದರಿ ಕಾಲೇಜಿನ ಕಟ್ಟಡವನ್ನು ಪ್ರಾರಂಭ ಮಾಡಲು ಅನುದಾನದ ಕೊರತೆಯಿರುವುದರಿಂದ ಈ ಕಾಮಗಾರಿಯನ್ನು ಹುಡ್ಕೋ ಸಂಸ್ಥೆಯ ಅನುದಾನ ನೆರವಿನಡಿ ಸೇರಿಸಿದ್ದು ಅಲ್ಲಿಂದ ಹಣ ಬಿಡುಗಡೆಯಾದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಈ) ಈ ಕಾಮಗಾರಿಯನ್ನು ಹುಡ್ಕೋ ಸಂಸ್ಥೆಯ ಅನುದಾನ ನೆರವಿನಡಿ ಸೇರಿಸಿದ್ದು ಅಲ್ಲಿಂದ ಹಣ ಬಿಡುಗಡೆಯಾದ ಕೂಡಲೇ ಪ್ರಾರಂಭ ಮಾಡಲಾಗುವುದು.

ತುರುವೇಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆ

2042(2558) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ(ಅಣ್ಣಯ್ಯ) (ತುರುವೆಕೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2002-03ರ ಸಾಲಿನಲ್ಲಿ ತುರುವೇಕೆರೆ ತಾಲ್ಲೂಕಿನಲ್ಲಿ ಗುರುತಿಸಲಾದ ನಬಾರ್ಡ್ ರಸ್ತೆಗಳು ಯಾವುವು;

ಆ) ಹಾಗಿದ್ದಲ್ಲಿ, ಗುರುತಿಸಿರುವ ರಸ್ತೆಗಳ ಕಾಮಗಾರಿ ಮುಗಿಸಿ ಹಳ್ಳಿಗಳಿಗೆ ಯಾವಾಗಿನಿಂದ ಸಂಚಾರ ಸೌಲಭ್ಯ ದೊರೆಯುವುದು;

ಇ) 'ಇದುವರೆಗೆ ಕಾಮಗಾರಿ ಪ್ರಾರಂಭಿಸದಿರಲು ಕಾರಣವೇನು;

ಈ) ಯಾವ ಸಂಸ್ಥೆಗೆ ಕಾಮಗಾರಿ ನೀಡಲಾಗಿದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಆ) 2002-03ರ ಸಾಲಿನಲ್ಲಿ ತುರುವೇಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿ ಅಮ್ಮಸಂದ್ರದಿಂದ ಬಿ.ಎಚ್ ರಸ್ತೆ ಕೂಡುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ. 25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಇ) ಸಚಿವ ಸಂಪುಟ ಉಪಸಮಿತಿಯ ಒಪ್ಪಿಗೆಗಾಗಿ ಕಳುಹಿಸಿರುವ ಕಾಮಗಾರಿಗಳ ವಿವರ ಕೆಳಕಂಡಂತಿದೆ.

		(ರೂ.ಲಕ್ಷಗಳಲ್ಲಿ)
1.	ಮಲ್ಲಘಟ್ಟ ದೇವಸ್ಥಾನದಿಂದ ಕೋಳಗಟ್ಟ ರಸ್ತೆ ಅಭಿವೃದ್ಧಿ	15.00
2.	ಅಡವನಹಳ್ಳಿ ಗೇಟ್‌ನಿಂದ ಗಿರೇನಹಳ್ಳಿ ರಸ್ತೆ ಅಭಿವೃದ್ಧಿ	15.00
3.	ವೈ.ಟಿ.ರಸ್ತೆ ಚಿಕ್ಕನಹಳ್ಳಿ ಗೇಟ್‌ನಿಂದ ಸುಂಕಲಾಪುರ ರಸ್ತೆ ಅಭಿವೃದ್ಧಿ	13.00